# ಕನ್ನಡ ಸಂಸ್ಕೃತಿ ಹಾಗೂ ಸ್ತ್ರೀವಾದಿ ಚಿಂತನೆಯ ತಾತ್ವಿಕ ನೆಲೆಗಳು

**ಹೊನ್ನಪ್ಪ ಹೆಚ್. ಕಡೇನಾಯ್ಕನಹಳ್ಳಿ**

ಸಹಾಯಕ ಪ್ರಾಧ್ಯಾಪಕರು & ಮುಖ್ಯಸ್ಥರು, ಕನ್ನಡ ವಿಭಾಗ, ಜಿ.ಜಿ.ಡಿ. ಕಲೆ, ಬಿ.ಎಂ.ಪಿ ವಾಣಿಜ್ಯ ಮತ್ತು ಎಸ್.ವಿ.ಎಸ್ ವಿಜ್ಞಾನ ಪದವಿ ಮಹಾವಿದ್ಯಾಲಯ, ಬೈಲಹೊಂಗಲ.

DOI: https://doi.org/10.5281/zenodo.18143799

## ABSTRACT:

ಸ್ತ್ರೀ ಅಥವಾ ಮಹಿಳೆ ಪದವು ಸಂಸ್ಕೃತದ್ದು, ಕನ್ನಡದಲ್ಲಿ ಈ ಪದಕ್ಕೆ 'ಹೆಣ್ಣು' ಎಂಬ ಅರ್ಥವಿದೆ. ಇದು ನಾಗರಿಕ ಗೌರವದ ಮತ್ತು ಪುರುಷ ಪದದ ಸಮಾನ ಪದವಾಗಿದ್ದು ವಯಸ್ಕ ಹೆಣ್ಣನ್ನು ಸೂಚಿಸಲು ಉಪಯೋಗಿಸಲಾಗುತ್ತದೆ. ಆದಿಯಿಂದಲೂ ಸೃಷ್ಟಿಯ ಮೂಲ ಸ್ತ್ರೀಯಾಗಿದ್ದಾಳೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಗೆ ಅವಳದೇ ಆದ ಗೌರವ, ಸ್ಥಾನಮಾನಗಳಿರುವುದನ್ನು ಗುರುತಿಸಬಹುದಾಗಿದೆ. ಸ್ತ್ರೀ ಅವಿನಾಶಿ, ಸಂಜೀವಿನಿ. ಹೆಣ್ಣು ವಿಶಿಷ್ಟ ಶಕ್ತಿಗಳ ಸಂಗಮ. ಮಮತೆ, ಕರುಣೆ, ವಾತ್ಸಲ್ಯ, ಅಕ್ಕರೆ ಮತ್ತು ಭೂಮಿತೂಕದ ತಾಳ್ಮೆಯುಳ್ಳ ಸ್ತ್ರೀ ಒಂದು ಪ್ರಬಲ ಶಕ್ತಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಮಹಿಳೆಯ ಜಾಯಮಾನ ಪುರುಷನ ಜಾಯಮಾನಕ್ಕಿಂತ ಭಿನ್ನವಾದದ್ದು. ಮಹಿಳೆಯನ್ನು ಹಿಂದಿನಿಂದಲೂ ಅಬಲೆಯೆಂದೇ ಕಡೆಗಣಿಸಲಾಗುತ್ತಿತ್ತು. ಮಾನವರಲ್ಲಿ ಗಂಡು ಅಥವಾ ಹೆಣ್ಣು ಎಂಬ, ನಿಸರ್ಗಬದ್ಧವಾಗಿ ಅಂಗಾಂಗ ವಿನ್ಯಾಸದಲ್ಲಿ ಭಿನ್ನತೆಯ ದೇಹಧಾರಣೆಯಾಗುತ್ತದೆ. ಹೆಣ್ಣು ಮತ್ತು ಗಂಡು ಎಂಬ ಜೈವಿಕ ಲಕ್ಷಣಗಳು ವ್ಯಕ್ತಿಯ ಹುಟ್ಟಿನಿಂದಲೇ ನಿರ್ಧಾರವಾಗುತ್ತದೆ.

ಸ್ತ್ರೀ ಕನಸೂ ಹೌದು, ವಾಸ್ತವವೂ ಹೌದು. ಪ್ರಕೃತಿಗೂ – ಸ್ತ್ರೀಗೂ ಅವಿನಾಭಾವ ಸಂಬಂಧವಿದೆ. ಈಕೆ ಭೂಮಿಯಾಗಿ, ಮುಗಿಲಾಗಿ, ಮೇರುಪರ್ವತವಾಗಿ ಬೆಳೆದು ನಿಂತಿದ್ದಾಳೆ. ಹಾಗಾಗಿ ಸ್ತ್ರೀಯನ್ನು ಸಮೃದ್ಧಿಯ ಸಂಕೇತವೆಂದು ಪರಿಭಾವಿಸಲಾಗಿದೆ. ಇಡೀ ವಿಶ್ವವೇ ಆರೋಗ್ಯಕರ ಮನೋಭಾವ ಹೊಂದಲು ಸಹಕಾರ ಶಕ್ತಿ ಸ್ತ್ರೀಯಾಗಿದ್ದಾಳೆ. ನಿಸರ್ಗದಲ್ಲಿ ಹಲವು ಬಗೆಯ ವೈವಿಧ್ಯತೆಗಳಿರುವಂತೆ ಸ್ತ್ರೀಯರಲ್ಲೂ ಹಲವು ವಿಧದ ಮಹಿಳೆಯರನ್ನು ಕಾಣಬಹುದು. ಚರಿತ್ರೆಯಲ್ಲಿ ಹಿಂದೆ ಮಾತೃಪ್ರಧಾನ ಕುಟುಂಬಗಳಿದ್ದುದನ್ನು ನಾವು ಸ್ಮರಿಸಬಹುದಾಗಿದೆ.

ತೊಂಬತ್ತರ ದಶಕದಲ್ಲಿ ಕನ್ನಡ ವಿಮರ್ಶಾ ಲೋಕಕ್ಕೆ ಸ್ತ್ರೀವಾದಿ ವಿಮರ್ಶೆಯ ಪ್ರವೇಶ ಅಧಿಕೃತವಾಗಿ ಆಗಿದೆ. ಸಾಹಿತ್ಯ ಕೃತಿಯ ವಿಮರ್ಶೆಗೆ ಅಲ್ಲಿಯವರೆಗೆ ಇದ್ದ ವಿವಿಧ ಮಾನದಂಡಗಳ ಜೊತೆಗೆ ಸ್ತ್ರೀವಾದವು ಇನ್ನೊಂದು ಮಾನದಂಡವೆಂದು ಭಾವಿಸಲಾಯಿತು. ಮಾರ್ಕ್ಸ್ ವಾದಿ ಮತ್ತು ಸಮಾಜವಾದಿ ವಿಮರ್ಶಾ ಸಿದ್ಧಾಂತದ ಭಾಗವಾಗಿಯೇ ಸ್ತ್ರೀವಾದಿ ವಿಮರ್ಶೆಯ ಉಗಮವನ್ನು ಗುರುತಿಸಬಹುದಾಗಿದೆ. ಕನ್ನಡದ ವಿವಿಧ ಕಾಲಘಟ್ಟದ ಸಾಹಿತ್ಯ ಕೃತಿಗಳಲ್ಲಿ ಸ್ತ್ರೀವಾದಿ ನೆಲೆಗಳನ್ನು ಗುರುತಿಸುವ ಕೆಲಸಗಳನ್ನು ನಾವು ಇಂದು ಕಾಣಬಹುದಾಗಿದೆ. ಅನಂತರದಲ್ಲಿ ಪಾಶ್ಚಾತ್ಯ ಸ್ತ್ರೀವಾದಿ ಚಿಂತಕಿಯರು ಮತ್ತು ಅವರ ಚಿಂತನೆಯ ಮುಖ್ಯ ಅಂಶಗಳನ್ನು ಕನ್ನಡಿಗರಿಗೆ ಪರಿಚಯಿಸುವಂಥ ಕಾರ್ಯವನ್ನು ಕಾಣುತ್ತೇವೆ.

ಈ ಕೆಲಸಗಳು ವೈಯಕ್ತಿಕ ನೆಲೆ ಹಾಗೂ ಸಾಂಘಿಕ ನೆಲೆಗಳಲ್ಲಿ ಏಕಕಾಲಕ್ಕೆ ಸಾಗಿದವು. ವಿಜಯಾ ದಬ್ಬೆ, ಬಿ.ಎನ್. ಸುಮಿತ್ರಾ ಬಾಯಿ, ನೇಮಿಚಂದ್ರ, ಎನ್. ಗಾಯಿತ್ರಿ ಮುಂತಾದವರು ಹೊಸ ಅಲೆಯ ವಿಮರ್ಶಾ ವಿಧಾನಕ್ಕೆ ಭದ್ರ ಬುನಾದಿಯನ್ನು ಹಾಕಿದರು.

ಪಿತೃಪ್ರಧಾನ ಸಂಸ್ಕೃತಿಯ ಪರಿಪಾಲಕರಿಂದ ಕಸಿದುಕೊಳ್ಳಲ್ಪಟ್ಟ, ಕಟ್ಟಿಹಾಕಲ್ಪಟ್ಟ ಮನುಷ್ಯ ಸಹಜವಾದ ಮೂಲಭೂತ ಸ್ವಾತಂತ್ರ್ಯವನ್ನು ಮರುಸ್ಥಾಪಿಸಿಕೊಳ್ಳುವಲ್ಲಿ, ಪಡೆದುಕೊಳ್ಳುವಲ್ಲಿ, ಮಹಿಳೆಯರು ಮತ್ತು ಶೋಷಿತ ವರ್ಗದವರು ನಡೆಸುವ ಹೋರಾಟವೇ ಸ್ತ್ರೀವಾದ. ಮಾನವನು ಸಮಾನತೆಯ ತತ್ವದಡಿಯಲ್ಲಿ ಉತ್ತಮ ಜೀವನ ನಿರ್ವಹಿಸಲು ಅಗತ್ಯವಾದ ಭೂಮಿಕೆಯನ್ನು ಸ್ತ್ರೀವಾದವು ನಿರ್ಮಿಸಿಕೊಡಲು ಪ್ರಯತ್ನಿಸುತ್ತದೆ. ಹಾಗೂ ಬದುಕಿನ ರೀತಿ-ನೀತಿಗಳನ್ನು ಪುನರ್ ವಿಶ್ಲೇಷಣೆಗೆ ಒಳಪಡಿಸುತ್ತದೆ. ಸ್ತ್ರೀವಾದದ ಮೇಲಿರುವ ಪಿತೃಪ್ರಧಾನ ವ್ಯವಸ್ಥೆಯನ್ನು ಅನುಕರಿಸುವವರ ಅಪಪ್ರಚಾರಗಳ ಹೊರತಾಗಿಯೂ, ಭವಿಷ್ಯದ ಪ್ರಜ್ವಲತೆಗಾಗಿ ಹೋರಾಟದ ಹಾದಿಯಲ್ಲಿ ಸಮಾನತೆಯ ಗುರಿಯೆಡೆಗೆ ಸ್ತ್ರೀವಾದಿಗಳು ಸಾಗುತ್ತಿದ್ದಾರೆ.

**KEYWORDS:**

ಲಿಂಗತಾರತಮ್ಯ, ಸ್ತ್ರೀವಾದ, ಪಿತೃಪ್ರಧಾನತೆ, ಶೋಷಣೆಯ ಮೂಲ, ಹೆಣ್ತನದ ಹೊರೆ.

"ಸಮಾಜದಲ್ಲಿ ಲಿಂಗಾಧರಿತ ಅಸಮಾನತೆಯಿದೆ ಎಂಬ ವಿಷಯದ ಬಗ್ಗೆ ಅರಿವನ್ನು ಮೂಡಿಸಿಕೊಂಡು ಸಮಾಜದ ವಿವಿಧ ಸಂಸ್ಥೆಗಳಲ್ಲಿ ಸ್ತ್ರೀಯರು ಎದುರಿಸುತ್ತಿರುವ ತಾರತಮ್ಯ, ದೌರ್ಜನ್ಯ ಹಾಗೂ ಶೋಷಣೆಗಳನ್ನು ಮನಗಂಡು, ಈ ಪ್ರವೃತ್ತಿಗಳನ್ನು ಕೊನೆಗಾಣಿಸಲು ನಡೆಸುವ ಎಲ್ಲಾ ಉದ್ದೇಶಿತ, ಪ್ರಾಮಾಣಿಕ ಪ್ರಯತ್ನಗಳನ್ನು ಸ್ತ್ರೀವಾದ ಎಂದು ಕರೆಯಬಹುದು."

ಮಹಿಳೆಯ ಮೇಲಾಗುತ್ತಿರುವ ಶೋಷಣೆಯ ವಿರುದ್ಧ ಬಂಡೇಳುವ ಸ್ತ್ರೀಯರು ಮಾತ್ರ ಸ್ತ್ರೀವಾದಿಗಳಲ್ಲ, ಮಹಿಳೆಯರನ್ನು ಒಳಗೊಂಡಂತೆ ಮಕ್ಕಳು, ಪುರುಷರು, ದಲಿತರು ಇತರ ಶೋಷಿತ ವರ್ಗದವರ ಮೇಲಾಗುವ ಶೋಷಣೆಯನ್ನು ವಿರೋಧಿಸುವ, ಸಕಾರಾತ್ಮಕ ಪ್ರತಿಫಲಗಳನ್ನು ದೊರಕಿಸಿಕೊಡುವ ಎಲ್ಲಾ ಪುರುಷರು ಸ್ತ್ರೀವಾದಿಗಳೇ. ಶೋಷಣೆಗೆ ಒಳಗಾದ ಮಹಿಳೆಯರ ಬದುಕಿನ ಬಗೆಗೆ ಅರಿವನ್ನು ಉಳ್ಳಂತಹ ಹಾಗೂ ಈ ಶೋಷಣೆಯ ಮೂಲ ಕರ್ತೃ, ಕ್ರಿಯೆಗಳನ್ನು ವಿರೋಧಿಸುವ ಧ್ವನಿಯುಳ್ಳವರು ಸ್ತ್ರೀವಾದಿಗಳಾಗಿರುತ್ತಾರೆ.

ಇವರ ಉದ್ದೇಶ ಲಿಂಗತಾರತಮ್ಯವನ್ನು ನಿರ್ನಾಮ ಮಾಡುವ ಮೂಲಕ ಸಮಾನತೆಯನ್ನು ಸ್ಥಾಪಿಸುವುದಾಗಿದೆ. ಎಲ್ಲಾ ವರ್ಗದ ಸ್ತ್ರೀಯರನ್ನು ಸಮಾಜಮುಖಿಯಾಗಿ ಕ್ರಿಯಾಶೀಲರನ್ನಾಗಿಸುವ ಜವಾಬ್ದಾರಿಯನ್ನು ಸ್ತ್ರೀವಾದ ನಿರ್ವಹಿಸುತ್ತದೆ. ಸ್ತ್ರೀಯರನ್ನು ಕೆಳ ಅಂತಸ್ತಿಗೆ ತಳ್ಳುವ ಎಲ್ಲಾ ಸಾಮಾಜಿಕ ಟೊಳ್ಳು

ಕಟ್ಟುಪಾಡುಗಳನ್ನು ಒಡೆಯುವುದೇ ಸ್ತ್ರೀವಾದದ ಗುರಿ. ಯಾವ ಅಧಿಕಾರಗಳ ಪ್ರಾಬಲ್ಯದಿಂದಾಗಿ ಸ್ತ್ರೀಯರ ಬದುಕಿನ ಸಹಜ ಮುನ್ನೆಡೆಗೆ ತೊಡಕುಂಟಾಗುತ್ತಿದೆಯೋ ಅಂತಹ ಅಧಿಕಾರಗಳನ್ನು ಶಕ್ತಿಹೀನಗೊಳಿಸುವ ಅನಿವಾರ್ಯತೆಯನ್ನು ಸ್ತ್ರೀವಾದಿಗಳು ಕಂಡುಕೊಂಡಿದ್ದಾರೆ.

ಗಂಡಸರ ಬದುಕಿನ ಪರಿಧಿಯೊಳಗೆ ಕೇಂದ್ರೀಕೃತಗೊಳ್ಳುತ್ತಿರುವ ಹೆಣ್ಣಿನ ಪಾತ್ರವನ್ನು, ವಿಕೇಂದ್ರೀಕರಿಸುವ ಪ್ರಯತ್ನ ನಡೆಯಬೇಕು. ತಾಯಿ, ಸೋದರಿ, ಮಡದಿ, ಪ್ರೇಯಸಿ, ಹೀಗೆ ಗಂಡಸಿನ ಬದುಕಿನಲ್ಲಿ ತನ್ನ ಜೀವಿತಾವಧಿಯ ಎಲ್ಲಾ ಹಂತಗಳನ್ನು ಸವೆಸುತ್ತಿರುವ ಹೆಣ್ಣು, ಗಂಡಸಿನ ಪ್ರಪಂಚದ ಹೊರಗೆ ತನ್ನ ಸ್ವತಂತ್ರ ಅಸ್ತಿತ್ವ ಕಂಡುಕೊಳ್ಳಬೇಕು. ಎಲ್ಲಾ ಕಾಲದಲ್ಲಿಯೂ ಸಮಾಜದಿಂದ ಆರೋಪಿಸಲ್ಪಟ್ಟಂತಹ 'ಹೆಣ್ತನ'ದ ಹೊರೆ ಹೊರುವ ಮಹಿಳೆಗೆ ಸಮಾಜದೊಂದಿಗೆ ಬಾಳಲು ಅರ್ಹಳೆಂದು ಪರಿಗಣಿಸಲಾಗುತ್ತದೆ. ಒಂದು ವೇಳೆ ಹೆಣ್ತನದ ಬಿಗಿಯನ್ನು ಪ್ರಶ್ನಿಸುವ ಇಲ್ಲವೇ ವಿರೋಧಿಸುವ ಮಹಿಳೆ ಸಾಮಾಜಿಕ ಸಂಬಂಧಗಳಿಂದ ತಿರಸ್ಕರಿಸಲ್ಪಡುತ್ತಾಳೆ.

ಸಿಮೋನ್ ದ ಬೋವಾ ಹೇಳುವಂತೆ 'ಮಹಿಳೆ ರೂಪಿಸಲ್ಪಟ್ಟವಳು'. ಈ ರೂಪಿಸಲ್ಪಡುವಿಕೆ ಹೆಣ್ಣಿಗೆ ಸಂಬಂಧಿಸಿದಂತೆ ಪುರುಷನಿಂದ ನಿರ್ಮಿಸಲ್ಪಟ್ಟ 'ಸ್ತ್ರೀಧರ್ಮ' ಎಂಬ ಬಂಧನದಲ್ಲಿ ಸಿಲುಕಿಸಿದೆ. ಶೀಲ ಪಾವಿತ್ರ, ತಾಯ್ತನ, ಪತಿವ್ರತಾ ನೀತಿ ಇತ್ಯಾದಿ ಸ್ತ್ರೀಧರ್ಮಗಳು ಹೆಣ್ಣು ಲಿಂಗದ ಮೇಲೆ ಬಲವಂತವಾಗಿ ಹೇರಲ್ಪಟ್ಟಿವೆ. ಈ ಗುಣಗಳ ಹೊರತಾಗಿ ಹೆಣ್ಣು ತನ್ನತನವನ್ನು ಸಾಧಿಸ ಹೊರಟರೆ ಆಕೆ ಹೀನಳಾಗಿ, ಗಂಡುಬೀರಿಯಾಗಿ, ಚಂಡಿಯಾಗಿ, ರಾಕ್ಷಸಿಯಾಗಿ ಪರಿಭಾವಿತಳಾಗಿ ಅವಹೇಳನಕ್ಕೊಳಗಾಗುತ್ತಾಳೆ.12

ಲಿಂಗ ಅಸಮಾನತೆಯ ಮೂಲಕಾರಣವನ್ನು ಜಾತಿಯ ಹುಟ್ಟು ಮತ್ತು ರಚನಾವಸ್ಥೆಯಲ್ಲಿ ಕಂಡುಕೊಳ್ಳಬಹುದು. ಜಾತಿವ್ಯವಸ್ಥೆ ಮತ್ತು ಲಿಂಗವ್ಯವಸ್ಥೆಯ ನಡುವೆ ಅವಿನಾಭಾವ ಸಂಬಂಧ4ವಿದೆ. ಸಂಪ್ರದಾಯ, ಆಚರಣೆಗಳ ತಾತ್ವಿಕ ನಾಯಕತ್ವದ ಸಲುವಾಗಿ ಜಾತಿ ಶ್ರೇಣೀಕರಣ ಹುಟ್ಟುಕೊಂಡಿತು. ಈ ಅವಧಿಯಲ್ಲಿ ಶ್ರೇಣೀಕರಣಗೊಂಡ ಜಾತಿಗಳು ಪುರುಷಾಧಿಕಾರತ್ವದ ಅಡಿಯಲ್ಲಿ ಸಂಸ್ಕಾರಗೊಳ್ಳುತ್ತಾ ಹೋದವು. ಇತರ ಜಾತಿಗಿಂತ ತಮ್ಮ ಜಾತಿ ಮೇಲು ಎಂದು ಪರಸ್ಪರ ಸಾಧಿಸಿಕೊಳ್ಳಲು ಪೈಪೋಟಿಗೆ ಬಿದ್ದ ಪುರುಷ ಸಮಾಜವು ಖಾಸಗಿ ಎಂದು ಗುರುತಿಸಲ್ಪಡುವ ಸ್ತ್ರೀಯನ್ನು ಮುಂದಿಟ್ಟುಕೊಂಡು ನೈತಿಕತೆ, ಲೈಂಗಿಕಮೌಲ್ಯ, ಧಾರ್ಮಿಕ ಮೌಲ್ಯಗಳೆಂಬ ಸಿದ್ಧ ಸೂತ್ರಗಳನ್ನು ಸ್ತ್ರೀಯರ ಮೇಲೆ ಹೇರುವ ಮುಖೇನ ಜಾತಿ ವೈಶಿಷ್ಟ್ಯ ಸಾಧಿಸುವ ಮಿಥ್ಯೆಯನ್ನು ಸೃಷ್ಟಿಸಿರುವುದನ್ನು ಕಾಣಬಹುದಾಗಿದೆ.

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಆಸ್ತಿ ಎಂಬ ಕಲ್ಪನೆಯು ಮಹಿಳೆಯರನ್ನು ಒಳಗೊಂಡಂತೆ ಅರ್ಥ ಪಡೆಯಿತು. ಪ್ರತಿ ಹೆಣ್ಣು ಆಕೆಯ ಗಂಡನ ಖಾಸಗಿ ಆಸ್ತಿಯಾಗಿ ಮಾರ್ಪಟ್ಟಳು. ಹೀಗೆ ಜಾತಿವ್ಯವಸ್ಥೆ ಹಾಗೂ ಲಿಂಗ ಅಸಮಾನತೆಯ ನಡುವೆ ಪೂರಕ ಸಂಬಂಧವನ್ನು ಗುರುತಿಸಬಹುದು. ಉಮಾ ಚಕ್ರವರ್ತಿ ಅವರ 'ಜೆಂಡರಿಂಗ್ ಕ್ಯಾಸ್ಟ್'

ಕೃತಿಯಲ್ಲಿ ಮಹಿಳೆಯರು ಪಿತೃಪ್ರಧಾನ ವ್ಯವಸ್ಥೆಯ ಬಂಧನದಿಂದ ಪಾರಾಗಲು ಸಾಧ್ಯವಾಗದೆ, ಆ ವ್ಯವಸ್ಥೆಯೊಟ್ಟಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ಗುರುತಿಸಿದ್ದಾರೆ.

ಮಹಿಳೆಯ ಬದುಕು ಹಸನಾಗಲು ಅವಳಲ್ಲಿ ಸಾಕಷ್ಟು ಬದಲಾವಣೆ ತರುವ ಅಗತ್ಯವಿದೆ. ಮಹಿಳೆಯಲ್ಲಾಗುವ ಬದಲಾವಣೆಯಿಂದ ಅವಳನ್ನು ಸುತ್ತುವರೆದಿರುವ ಸಮಾಜ, ಸಂಬಂಧಗಳು, ಶೋಷಣಾ ವಲಯಗಳು ಕೂಡ ಬದಲಾಗುತ್ತದೆ. ಆದರೆ ಮಹಿಳೆಯನ್ನು ಆವರಿಸಿರುವ ಸಮಾಜದ ಸಾಂಪ್ರದಾಯಿಕ ಕೊಂಡಿಗಳು, ತಮ್ಮ ಯಜಮಾನಿಕೆಯ ಉತ್ತಮ ಸ್ಥಿತಿಯನ್ನು ಬದಲಾಯಿಸಿಕೊಳ್ಳಲು, ಬಿಟ್ಟುಕೊಡಲು ಸಿದ್ಧವಿರುವುದಿಲ್ಲ. ಈ ಕಾರಣಕ್ಕಾಗಿಯೇ ಮಹಿಳೆಯರ ಸ್ಥಿತಿ–ಗತಿ ಸುಧಾರಣೆಯು ಕಷ್ಟಕರವೆನಿಸುತ್ತದೆ.

ಸ್ತ್ರೀವಾದಿ ಗ್ರಹಿಕೆಯು ಅನೇಕ ವೈರುಧ್ಯಗಳಿಂದ ಕೂಡಿವೆ. ಈ ವೈರುಧ್ಯಗಳ ತಾತ್ವಿಕ ತಳಹದಿಯ ಭಿನ್ನತೆಗೆ ಕಾರಣ ಮಹಿಳೆಯರ ಬದುಕನ್ನು ಆವರಿಸಿರುವ ವಿವಿಧ ಕಾಲ, ದೇಶ, ಧರ್ಮ, ಸಂಪ್ರದಾಯಗಳು. ಸ್ತ್ರೀವಾದಿ ಚಿಂತನೆಯ ಹಿನ್ನೆಲೆಯಲ್ಲಿ ಅನೇಕ ಜ್ಞಾನಶಿಸ್ತುಗಳು ಹೊಸ ವ್ಯಾಖ್ಯಾನಗಳಿಗೆ ತೆರೆದುಕೊಳ್ಳುತ್ತಿದೆ. ಹೀಗಾಗಿ ಸ್ತ್ರೀವಾದದ ವ್ಯಾಪ್ತಿ ಹೆಚ್ಚು ವಿಶಾಲವಾದುದ್ದಾಗಿದೆ. ಮಹಿಳೆಯರು ತಮ್ಮ ಬದುಕಿನ ಆಯ್ಕೆ ಕುರಿತು ಸಂಪೂರ್ಣ ಸ್ವಾತಂತ್ರ್ಯ ಪಡೆಯುವಲ್ಲಿ, ಮಹಿಳೆಯರ ಅಸ್ತಿತ್ವ ಕುರಿತಾಗಿ ಸಮಾಜದಲ್ಲಿ ನಡೆಯುತ್ತಿರುವ ಪರ–ವಿರೋಧಗಳ ಚರ್ಚೆಯೇ ಸ್ತ್ರೀವಾದದ ತಾತ್ವಿಕ ಚಿಂತನೆಯಲ್ಲಿ ಭಿನ್ನತೆಗೆ ತಳಹದಿಯಾಗಿದೆ. ಸಮಾಜದ ರೀತಿ–ನೀತಿ, ಸಂಪ್ರದಾಯ–ಆಚರಣೆಗಳ ಮಾದರಿಗಳನ್ನು ವೈಚಾರಿಕ ದೃಷ್ಟಿಕೋನದಿಂದ ಪುನರ್ ವ್ಯಾಖ್ಯಾನಕ್ಕೆ ಒಳಗುಮಾಡುವ ಕೆಲಸವನ್ನು ಸ್ತ್ರೀವಾದ ನಿರ್ವಹಿಸುತ್ತದೆ.

ಪಿತೃಪ್ರಧಾನ ಧೋರಣೆಯಿಂದ ದಾಸ್ಯಕ್ಕೊಳಗಾದ ಶೋಷಿತರ ನೋವಿನ ಕಿಚ್ಚಿಗೆ, ಸಮಾಜದ ಕಟ್ಟುಪಾಡುಗಳ, ಬದುಕಿನ ಅನಿವಾರ್ಯತೆಗಳ ಬೂದಿ ಮುಚ್ಚಿರುವಾಗ ಪಾಶ್ಚಾತ್ಯ ಸ್ತ್ರೀವಾದದ ಹೋರಾಟದ ಬಿರುಗಾಳಿ ಭಾರತೀಯ ಮನಸ್ಸುಗಳ ಮೇಲಿನ ಬೂದಿಯನ್ನು ಸರಿಸಿ, ಸ್ವಾತಂತ್ರ್ಯದ ಜ್ವಾಲೆ ಹೊತ್ತಲು ಕಾರಣವಾಯಿತು. ಹೀಗಾಗಿ ಸ್ತ್ರೀವಾದಿ ಸಿದ್ಧಾಂತವು ಪಾಶ್ಚಾತ್ಯರ ಅನುಕರಣೆಯಿಂದ ಭಾರತೀಯ ಮನಸ್ಸುಗಳಿಗೆ ಅಂಟಿದ ರೋಗವಲ್ಲ. ಸ್ತ್ರೀವಾದವು, ಪಿತೃಪ್ರಧಾನ ಸಮಾಜದ ಹಿಂಸಾತ್ಮಕ ಕಟ್ಟುಪಾಡುಗಳಡಿ ನರಳುತ್ತಿರುವ ಮಹಿಳೆಯರ ಉಜ್ವಲ ಭವಿಷ್ಯದ ಜ್ಯೋತಿಯಾಗಿದೆ.

ನಮ್ಮ ನಾಡಿನ ಬಹುಸಾಂಸ್ಕೃತಿಕ ಪರಿಸರವು ಏಕಾಕಾರದ ಪಿತೃಪ್ರಧಾನದ ಸಂರಚನೆಯನ್ನು ಕೆಲಮಟ್ಟಿಗೆ ಮುಸುಕುಗೊಳಿಸುವಂತಿದೆ. ಇಲ್ಲಿಯ ಸಾಂಸ್ಕೃತಿಕತೆಯು ಉಳಿಗಮಾನ್ಯ ಕೃಷಿಪ್ರಧಾನ ಆರ್ಥಿಕ ವ್ಯವಸ್ಥೆ, ಬಂಡವಾಳಶಾಹಿ ಮತ್ತು ಸ್ವಾತಂತ್ರ್ಯೋತ್ತರ ಜನತಾಂತ್ರಿಕ ಬಂಡವಾಳಶಾಹಿಗಳೆಲ್ಲವನ್ನೂ ಒಟ್ಟೊಟ್ಟಾಗಿ ಪ್ರದರ್ಶಿಸುತ್ತಿರುವಂಥದ್ದು.

ಇಲ್ಲಿನ ಚಿಂತನೆಯು ಪ್ರಧಾನವಾಗಿ ಲಿಂಗತ್ವದ ಲಕ್ಷಣವನ್ನೇ ಹೊಂದಿದ್ದರೂ

ಸಹ ಇನ್ನೂ ಬಲವಾಗಿ ಜಾತಿವ್ಯವಸ್ಥೆ, ವರ್ಗವ್ಯವಸ್ಥೆ, ಗ್ರಾಮೀಣ ನೆಲೆಯ ರೂವಾರಿಗಳಾಗಿ ಕಂಡುಬರುತ್ತವೆ. ಹಾಗೆಯೇ ಪುರೋಹಿತಶಾಹಿ, ಶ್ರೇಣೀಕೃತ ಧಾರ್ಮಿಕ ವ್ಯವಸ್ಥೆಗಳಿದ್ದರೂ, ಭೂಮಿಯ ಒಡೆತನ, ಸಂಖ್ಯಾಬಲ, ರಾಜಕೀಯ ಅಧಿಕಾರದ ಒಡೆತನಗಳು, ಮಧ್ಯಮಜಾತಿಗಳ ಯಜಮಾನಿಕೆಗೆ ಸೇರಿರುವುದನ್ನು ಗುರುತಿಸಬಹುದಾಗಿದೆ. ವರ್ತಮಾನದ ಸಾಂಸ್ಕೃತಿಕ ಪರಿಸರ ಹೀಗಿದ್ದರೆ, ಗತಿಸಿದ ಕಾಲದ ಮಾತೃಪ್ರಧಾನ ಸಾಂಸ್ಕೃತಿಕ ಅಂಶಗಳು ಪಳೆಯುಳಿಕೆಯ ರೀತಿಯಲ್ಲಿ, ಮುಖ್ಯ ವ್ಯವಸ್ಥೆಯ ಅಧೀನ ನೆಲೆಗಳಲ್ಲಿ ಉಸಿರಾಡುತ್ತಿವೆ. ಅದು ಹೇಗೆಂದರೆ ಇಲ್ಲಿನ ಕೆಳಜಾತಿ, ಕೆಳವರ್ಗದ ಜನರ ಸಾಮಾಜಿಕ, ಧಾರ್ಮಿಕ, ಆಚರಣೆಗಳಲ್ಲಿ ನಾಡಿನ ಜಾನಪದ ಹಬ್ಬ, ಉತ್ಸವ, ಹಾಡು, ಕಥೆ, ಕುಣಿತಗಳಲ್ಲಿ ಸ್ತ್ರೀಸಬಲತೆಯ ಲಕ್ಷಣಗಳನ್ನು ಕಾಣಬಹುದಾಗಿದೆ.

ಮುಖ್ಯವಾಗಿ ಇಲ್ಲಿ ಸಾಂಸ್ಕೃತಿಕ ಸ್ತರಗಳ ವೈವಿಧ್ಯ ಇರುವುದರಿಂದ ಶ್ರೇಣೀಕರಣ, ಶೋಷಣೆ, ಅಸಮಾನತೆ, ದಮನಕಾರಿ ತತ್ವಗಳು ಈ ನಾಡಿನಲ್ಲಿ ಕೇವಲ ಲಿಂಗತಾರತಮ್ಯಕ್ಕಷ್ಟೇ ಸೀಮಿತವಲ್ಲ, ಇದು ಜಾತಿ, ವರ್ಗ ಭೇದಗಳಲ್ಲೂ ಇರುವುದನ್ನು ಕಾಣಬಹುದಾಗಿದೆ. ಕರ್ನಾಟಕದ ಸಂದರ್ಭಕ್ಕೆ ಸ್ತ್ರೀವಾದಿ ತತ್ವಗಳು ಪ್ರವೇಶಿಸುವುದರಿಂದ, ಇಲ್ಲಿನ ಬಹುಮುಖ ಶ್ರೇಣಿಗಳಲ್ಲಿ ಸ್ತ್ರೀಪುರುಷರ ಸಂಬಂಧಗಳಲ್ಲಿ ಎಲ್ಲಿ ಯಜಮಾನಿಕೆ, ಅಧಿಕಾರಗಳು ತಲೆತೂರಿಸುತ್ತವೆ ಎಂಬುದನ್ನು ವಿಶ್ಲೇಷಿಸಲು ಸಾಧ್ಯವಿದೆ. ಸ್ತ್ರೀಯರು ಎಲ್ಲಿ ನಿಜವಾಗಿ ದಮನಕ್ಕೆ ಒಳಗಾಗಿದ್ದಾರೆ ಹಾಗೂ ಎಲ್ಲಿ ಅವರದೇ ಪ್ರಾಬಲ್ಯದ ಅವಕಾಶಗಳಿವೆ ಎಂಬುದನ್ನು ಹುಡುಕಿ ನಮ್ಮ ಸಂಸ್ಕೃತಿಗೆ ಹೊಂದುವಂಥ ಸ್ತ್ರೀವಾದದ ತಾತ್ವಿಕತೆಯನ್ನು ಗುರುತಿಸಬಹುದಾಗಿದೆ.

ಕನ್ನಡದ ಪ್ರಾಚೀನ ಸಾಹಿತ್ಯ ಘಟ್ಟಗಳಲ್ಲಿ ಶಿಷ್ಟ ಸಾಂಸ್ಕೃತಿಕ ವಾಹಿನಿಯು ಪಿತೃಪ್ರಧಾನ ಲಕ್ಷಣವನ್ನೇ ಬಿಂಬಿಸುವುದನ್ನು ಕಾಣಬಹುದು. ಮಾತ್ರವಲ್ಲ ಈ ನೆಲದ ಮೂಲ ಸಂಸ್ಕೃತಿ ಮಾತೃಪ್ರಧಾನವಾಗಿತ್ತು ಎನ್ನಲಾಗುವ ದ್ರಾವಿಡ ಸಂಸ್ಕೃತಿಯೇ ಎಂದು ಭಾವಿಸಲಾಗುತ್ತದೆ. ಹಾಗಿದ್ದರೂ ಜನರ ಧೋರಣೆಗಳು ಪಿತೃಪ್ರಧಾನ ಮೌಲ್ಯಗಳಿಂದಲೇ ರೂಪುಗೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ. ನಿರಕ್ಷರತೆ, ಬಡತನಗಳ ಫಲವಾಗಿ ನಾಡಿನ ಸ್ತ್ರೀಯರು ಲಿಂಗತಾರತಮ್ಯದ ಮೂಲಕ ಅನೇಕ ದುಃಖ, ನೋವುಗಳನ್ನೇ ಉಂಡು, ಹಾಸಿ, ಹೊದ್ದು ನಂತರ ಬದುಕಲು ಹಾತೋರೆದು ತಮ್ಮ ನೋವಿನ ಅನುಭವಗಳ ಬಗ್ಗೆ ಹೊಸ ಅರಿವನ್ನು ಕಂಡುಕೊಂಡರು. ತಾವು ಹೊಂದಿರುವ ಮನೋಧರ್ಮದ ಮೂಲಕ ಎಚ್ಚೆತ್ತುಕೊಂಡು ಬದುಕನ್ನು ರೂಪಿಸಿಕೊಳ್ಳುತ್ತಿದ್ದಾರೆ.

ಪ್ರಾಚೀನ ಕಾಲದ ಕನ್ನಡದ ಧಾರ್ಮಿಕ ಸಾಹಿತ್ಯ ಮತ್ತು ವೀರಕಾವ್ಯಗಳು ಪ್ರಮುಖವಾಗಿ ಪುರುಷರ ಧಾರ್ಮಿಕ, ತಾತ್ವಿಕ, ಸಾಮಾಜಿಕ ಮತ್ತು ರಾಜಕೀಯ ಚಿಂತನೆಗಳನ್ನು ಪ್ರತಿಬಿಂಬಿಸುತ್ತವೆ. ಕೆಲ ಪಾತ್ರಗಳು ವೀರರ ಮಾತೆಯಾಗಿ, ಪತ್ನಿಯಾಗಿ, ಮಗಳಾಗಿರುವ ಸ್ತ್ರೀಯರು ತಾತ್ಕಾಲಿಕವಾಗಿ ಮಾತ್ರ ಕವಿಗಳ ಗಮನವನ್ನು

ಪಡೆಯುತ್ತಾರೆ. ಆನಂತರ ಆ ಪಾತ್ರಗಳು ಗೌಣವಾಗಿರುವುದನ್ನು ಕಾಣಬಹುದಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಯ ಕುರಿತಂತೆ ಹೆಣ್ಣನ್ನು ಪಿತೃಪ್ರಧಾನ ಧೋರಣೆಗಳಲ್ಲಿ ಪ್ರತಿನಿಧಿಸಿರುವುದನ್ನು ಗಮನಿಸಬಹುದಾಗಿದೆ. ಶೃಂಗಾರ ರಸವನ್ನು ಸೃಷ್ಟಿಸುವುದಕ್ಕಾಗಿ ಸ್ತ್ರೀಯರ ದೇಹವನ್ನು ವರ್ಣಿಸುವುದು, ಆಡಂಬರ, ಸುಖದ ಕಲ್ಪನೆಗಳಿಗೆ ಸ್ತ್ರೀಯರನ್ನು ಅಲಂಕಾರದ ವಸ್ತುಗಳಾಗಿ ಬಳಸುವುದು, ಹಾಗೆಯೇ ವಿರಕ್ತಿಧರ್ಮದ ಕೊಂಡಾಟಕ್ಕಾಗಿ ಸ್ತ್ರೀನಿಂದನೆ ಮಾಡಿರುವುದನ್ನು ಬಹಳವಾಗಿ ಕಾಣಬಹುದಾಗಿದೆ. ಮತ್ತು ಅವಹೇಳನವಾಗಿ ಸ್ತ್ರೀಯರನ್ನು ಪ್ರತಿಪಾದಿಸಿದ್ದಾರೆ. ಹಾಗೆಯೇ ಇಲ್ಲಿ ಮುಖ್ಯವಾದ ಅಂಶವೆಂದರೆ ಕನ್ನಡ ಕವಿಗಳು ತಮ್ಮದೇ ನಾಡ ಸಂಸ್ಕೃತಿಯನ್ನು ಕಟ್ಟಲು ಹಲವು ಬಗೆಯಲ್ಲಿ ಪ್ರತಿಭಟನೆಯನ್ನು ಹೂಡಿ, ಕನ್ನಡ ಪರಂಪರೆಯನ್ನು ಕಟ್ಟಿದರೆಂದು ಚರಿತ್ರೆಯಿಂದ ತಿಳಿಯಬಹುದಾಗಿದೆ. ಆದರೆ ಹೆಣ್ಣಿನ ವಿಷಯವಾಗಿ ಈ ನಾಡ ಪರಂಪರೆ ಯಾವುದೇ ಹೊಸ ಬದಲಾವಣೆಯ ಅಂಶಗಳನ್ನು ಎತ್ತಿ ಹಿಡಿಯದೆ, ಕೇವಲ ಮಾರ್ಗ ಪರಂಪರೆಯನ್ನು ಅನುಸರಿಸಿತು ಎಂಬುದು ಕುತೂಹಲಕರ ವಿಚಾರವಾಗಿದೆ.

ಲಿಂಗಭೇದಕ್ಕೆ ಸಂಬಂಧಿಸಿದಂತೆ ಹಲವು ಸಂದರ್ಭಗಳಲ್ಲಿ ನಿರ್ದಿಷ್ಟ ಉದ್ದೇಶ ಹಾಗೂ ಆಶಯಗಳಿಗಾಗಿ ಕವಿಗಳು ಸ್ತ್ರೀಪಾತ್ರಗಳನ್ನು ಅವಹೇಳನಕರವಾಗಿ, ವಿಕೃತವಾಗಿ ಚಿತ್ರಿಸಿದ್ದಾರೆ. ಭೀಷ್ಮನ ಬ್ರಹ್ಮಚರ್ಯ ನಿಷ್ಠೆ, ಅವನ ಶೀಲಪಾವಿತ್ರಗಳನ್ನು ಎತ್ತಿ ಹಿಡಿಯಲೆಂದೇ ಅಂಬೆಯು ಗಂಡಾದರೂ ಪುರುಷತ್ವ ಇಲ್ಲದವಳಾಗಿ, ಆಕೆ ಅವಹೇಳನಕ್ಕೆ ಒಳಗಾಗುವುದನ್ನು ಪಂಪ ಕವಿ ಚಿತ್ರಿಸಿದ್ದಾರೆ. ಹಾಗೆಯೇ ಜನ್ನ ಕವಿಯು ಅಮೃತಮತಿಯನ್ನು ಆಕೆಯ ಲೈಂಗಿಕ ಅಭಿರುಚಿಗಾಗಿ ಅವಹೇಳನಕರವಾಗಿಸಿ ಯಶೋಧರನ ಹಿರಿಮೆಯನ್ನು ಸಾಧಿಸುವ ರೀತಿಗಳನ್ನು ನೋಡಬಹುದಾಗಿದೆ. ಸ್ತ್ರೀವಾದಿ ವಿಮರ್ಶೆಯು ಇಂಥ ವೈದೃಶ್ಯಗಳನ್ನು ವಿಶ್ಲೇಷಿಸಿ, ಆ ಪಾತ್ರಗಳ ಸಂಕೇತಾರ್ಥವನ್ನು ಬಯಲಿಗೆ ತಂದು ಆ ಪಾತ್ರಗಳು ಸೂಚಿಸುವ ಬದುಕಿನ ಸ್ಥಿತಿಗತಿಗಳನ್ನು ಲಿಂಗಭೇದವಿಲ್ಲದೆ ಮಾನವೀಯವಾಗಿ ನೋಡುವಂತೆ ಪ್ರೇರೇಪಿಸುತ್ತದೆ.

ಲಿಂಗಭೇದ ವ್ಯವಸ್ಥೆಯ ವಿರುದ್ಧವಾಗಿ ಗಮನಾರ್ಹ ತಾತ್ವಿಕ ಪ್ರತಿಭಟನೆಯನ್ನು ತೋರಿದಂತಹ ಚಳುವಳಿ ಎಂದರೆ ವಚನಸಾಹಿತ್ಯ. ಈ ಸಾಹಿತ್ಯವು ಇಂದಿನ ಸ್ತ್ರೀವಾದಿ ಕಾಳಜಿಗೆ ತುಂಬ ಉಪಯುಕ್ತವಾದ ಮಾದರಿಯನ್ನು ಕಟ್ಟಿಕೊಡುತ್ತದೆ. ವಚನಯುಗದ ಮಹಿಳೆಯರು ಸಮಾಜದ ವಿವಿಧ ಜಾತಿ, ವೃತ್ತಿ, ವರ್ಗಗಳೆಲ್ಲವನ್ನೂ ದಾಟಿ ಬಂದವರು. ಆತ್ಮಸಾಧನೆ ಮತ್ತು ಕಾಯಕ ತತ್ವಗಳ ಮೂಲಕ ಶಿವತತ್ವದಡಿಯಲ್ಲಿ ಸಮಾನತೆಯನ್ನು ಕಂಡುಕೊಂಡವರು. ಹಲವಾರು ಸ್ಥಾಪಿತ ಮೌಲ್ಯಗಳನ್ನು, ದಬ್ಬಾಳಿಕೆಗಳನ್ನೂ ಧಿಕ್ಕರಿಸಿದ, ಅನನ್ಯ ಕ್ರಾಂತಿಕಾರಕ ಮಹಿಳೆ ಅಕ್ಕಮಹಾದೇವಿ. ಇವಳು ಕುಟುಂಬ, ಪತಿಯ ಯಜಮಾನಿಕೆ, ಆಳುವ ಪ್ರಭುತ್ವದ ನಿರಂಕುಶತೆ ಅನೇಕ ಸ್ಥಾಪಿತ ಮೌಲ್ಯಗಳನ್ನು ಧಿಕ್ಕರಿಸಿದ್ದರು.

ಮಾತ್ರವಲ್ಲ ಹೆಣ್ಣಿಗೆ ಆ ಕಾಲಕ್ಕೆ ಅಲಭ್ಯವಿದ್ದ ಸ್ವಮತ ಬದುಕಿನ ವಿಧಾನವನ್ನು

ಆರಿಸಿಕೊಂಡು ಬದುಕುವ, ಸಾಧಿಸುವ ಛಲವನ್ನು ತೋರಿದ್ದಾರೆ. ಲಿಂಗಾತೀತ ನೆಲೆಗಾಗಿ ಹಂಬಲಿಸಿಯೂ, ತನ್ನೆಲ್ಲ ಅನುಭವಗಳಿಗೆ ಹೆಣ್ಣಾಗಿಯೇ ನುಡಿಗೊಟ್ಟ ವಚನಕಾರ್ತಿಯರು ನಿಜವಾಗಿ ಕರ್ನಾಟಕದ ಸ್ತ್ರೀಪರ ಚಿಂತನೆಯತ್ತ ಬೆಳಕು ತೋರಬಲ್ಲ ಶರಣದೀವಿಗೆಗಳು.

ಕನ್ನಡ ಜಾನಪದದ ಪ್ರಾಚೀನತೆಯ ಕೆಲವು ಅಂಶಗಳಲ್ಲಿ ಪಿತೃಪ್ರಧಾನ ಮೌಲ್ಯವ್ಯವಸ್ಥೆಯಲ್ಲಿ ಬಂದ ಮಹಿಳಾ ಜಾನಪದದಲ್ಲಿ ಹೆಣ್ಣು ತನ್ನ ಸಂಕಟ, ಬೇನೆ, ಸಂತಸಗಳ ಬದುಕನ್ನು ತಾನೇ ಕಾಣುವಂತೆ ಹೇಳಿಕೊಂಡಿದ್ದಾಳೆ. ಆ ಅನುಭವವು ಸವತಿ, ಓರಗಿತ್ತಿ, ಅತ್ತೆ, ನಾದಿನಿಯರ ವಿಷಯವನ್ನು ಹಾಡು, ಕಥೆಗಳ ಮೂಲಕ ಅಭಿವ್ಯಕ್ತ ಪಡಿಸಿದ್ದಾರೆ.

ಹೆಣ್ಣುಮಕ್ಕಳ ಅಂತರಂಗದ ಒಳತೋಟಿಗಳನ್ನು ಕಟ್ಟಿಕೊಡುವ ಜಾನಪದ ಸಾಹಿತ್ಯವು ಮಹಿಳೆಯರ ಸಾಮಾಜಿಕ ಸ್ಥಿತಿಗತಿಗಳ ದಾಖಲೆಯಾಗಿರುವುದನ್ನು ಕಾಣಬಹುದು. ಇದು ಸ್ತ್ರೀವಾದಿ ವಿಮರ್ಶೆಗೆ ಮುಖ್ಯ ಸಾಧನವಾಗಿದೆ. ನೇರವಾಗಿ ಮಾತನಾಡಲು ಆಸ್ಪದವೀರದ, ಧ್ವನಿಯನ್ನು ಎತ್ತದಂತೆ ಬಾಯಿ ಮುಚ್ಚಿಸುವ ವ್ಯವಸ್ಥೆಯೊಳಗೆ ಮಹಿಳೆ ತನ್ನೊಳಗಿನ ತುಡಿತಗಳಿಗೆ ನೇರವಾಗಿ ಅಭಿವ್ಯಕ್ತಿ ನೀಡದೆ, ಪರೋಕ್ಷವಾಗಿ ಹೇಳುವ ಉಪಾಯವನ್ನು ರೂಢಿಸಿಕೊಂಡಿರುತ್ತಾಳೆ. ಇಂಥ ಮಾರ್ಗದ ಮೂಲಕ ಹೇಗೆ ಸ್ವಾಭಿವ್ಯಕ್ತಿಯನ್ನು ಸಾಧಿಸುತ್ತಾಳೆಂದು ಗುರುತಿಸುವುದು ಸ್ತ್ರೀವಾದಿ ವಿಶ್ಲೇಷಣೆಯ ಮುಖ್ಯ ಕಾಳಜಿಯಾಗಿದೆ.

ಒಟ್ಟಿನಲ್ಲಿ ನಾಡಿನ ಆಧುನೀಕರಣದ ಪ್ರಕ್ರಿಯೆಗೆ ಪುರುಷರು ಸ್ಪಂದಿಸಿರುವ ಬಗೆಗಳನ್ನು ನೋಡುವಾಗ ಹೊಸ ಹೊಸ ಆವಿಷ್ಕಾರಗಳಲ್ಲಿ ಪುರುಷರು ಪ್ರತಿನಿಧಿಗಳಾಗಿದ್ದರು, ಹಳೆಯ ಸಾಂಸ್ಕೃತಿಕ ಮೌಲ್ಯಗಳ ಗಟ್ಟಿತನಕ್ಕೆ ಸ್ತ್ರೀಯರು ಪ್ರತೀಕವಾಗಿದ್ದಾಳೆ ಎಂಬುದನ್ನು ಗುರುತಿಸಬಹುದಾಗಿದೆ. ಹಾಗೆಯೇ ಆಧುನಿಕ ಮಹಿಳಾ ಬರಹಗಾರರು ಸಾಂಪ್ರದಾಯಿಕ, ಸಾಂಸ್ಕೃತಿಕ ಮೌಲ್ಯಕ್ಕೆ ಪ್ರತೀಕವಾಗುವ ಬದಲು ಕುಟುಂಬ, ದಾಂಪತ್ಯ, ವಿವಾಹ, ಸಾಮಾಜಿಕ ಮೌಲ್ಯ, ಸಾಮಾಜಿಕ ವಿಚ್ಛಿದ್ರವಾಗುತ್ತಿರುವ ಅಂಶಗಳನ್ನು ಸೃಷ್ಟಿಸುತ್ತಿದ್ದಾರೆ ಎಂಬುದನ್ನು ಸ್ತ್ರೀವಾದಿ ಅಧ್ಯಯನದಿಂದ ತಿಳಿಯಬಹುದಾಗಿದೆ. ಹಾಗೆಯೇ ಸ್ತ್ರೀ–ಪುರುಷರನ್ನು ಸಮಾನ ಸಖಿ–ಸಖರಂತೆ ಗುರುತಿಸಿಕೊಂಡು ಸಾಮಾಜಿಕ ಆದರ್ಶವನ್ನು ಎತ್ತಿ ಹಿಡಿದಿದೆ. ಈ ಸಾಮಾಜಿಕ ಆದರ್ಶ ಮಹಿಳಾ ಬರಹ ಮಾತ್ರವಲ್ಲ ಎಲ್ಲಾ ವ್ಯವಸ್ಥೆಯ ಆಶಯವೇ ಆಗಿದೆ ಎಂಬುದನ್ನು ಸ್ತ್ರೀವಾದಿ ಚಿಂತನೆಯ ಮೂಲಕ ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಕೇಶವಶರ್ಮ ಕೆ., (1992), ಸ್ತ್ರೀವಾದಿ ವಿಮರ್ಶೆ, ಬೆಂಗಳೂರು: ಅನ್ವೇಷಣೆ ಪ್ರಕಾಶನ.
2. ಗಾಯಿತ್ರಿ ಎನ್., (1992), ಮಹಿಳೆ ಬಿಡುಗಡೆಯ ಹಾದಿಯಲ್ಲಿ, ಬೆಂಗಳೂರು: ನವ ಕರ್ನಾಟಕ ಪಬ್ಲಿಕೇಷನ್ಸ್.
3. ಮಂಗಳಾ ಪ್ರಿಯದರ್ಶಿನಿ ಡಿ., (2007), ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, ಬೆಂಗಳೂರು: ಹೇಮಂತ ಸಾಹಿತ್ಯ.
4. ಸುಮಿತ್ರಾಬಾಯಿ ಬಿ.ಎನ್., (1999), ಸ್ತ್ರೀವಾದ ಒಂದು ಅವಲೋಕನ, ಶಿವಮೊಗ್ಗ: ಅಹರ್ನಿಶಿ ಪ್ರಕಾಶನ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.